**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

---

ಸಿ.ಸಿ. ನಂ. : **308/2016** ದಿನಾಂಕಃ **18.03.2024**
ಸಿ ಡಬ್ಲೂ : **3**
ಪಿ ಡಬ್ಲೂ : **5**

-------------------------------------------------------------------------------------

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

| | |
|---|---|
| ಸಾಕ್ಷಿದಾರನ ಹೆಸರು | ಡಿ.ಎಮ್. ಕುರಾಡೆ |
| ಗಂಡ/ ತಂದೆಯ ಹೆಸರು | ಮಚ್ಚೇಂದ್ರ |
| ವಯಸ್ಸು | 43 ವರ್ಷ |
| ಉದ್ಯೋಗ | ಅಬಕಾರಿ ಮುಖ್ಯಪೇದೆ |
| ವಾಸಸ್ಥಳ | ಸಾಃ ಅಥಣಿ |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ವಕೀಲರಿಂದಃ

ನಾನು 2008 ರಿಂದ 2016 ರವರೆಗೆ ಅಬಕಾರಿ ರಕ್ಷಕರು ಅಥಣಿ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 26.09.2015 ರಂದು ನಾನು ಕಛೇರಿಯಲ್ಲಿದ್ದಾಗ ಚಾಸಾ-6 ರವರು ನಮಗೆ ಅಕ್ರಮವಾಗಿ ಮಹಾರಾಷ್ಟ್ರ ದೇಸಿ ಸಾಂತ್ರಾ ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮಿಯ ಬಗ್ಗೆ ತಿಳಿಸಿರುತ್ತಾರೆ . ಆಗ ನಾವು ಚಾಸಾ-1, 2 ಹಾಗೂ 6 ರವರು ಸರ್ಕಾರಿ ವಾಹನ ನಂಬರ ಕೆಎ-22/ ಜಿ-457 ನೇದರಲ್ಲಿ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಅಲ್ಲಿ ಸಂಬರಗಿ ಬಸ ನಿಲ್ದಾಣದ ಹತ್ತಿರ ನಮ್ಮ ವಾಹನವನ್ನು ನಿಲ್ಲಿಸಿದಾಗ ಅಲ್ಲಿದ್ದ ಒಬ್ಬ ವ್ಯಕ್ತಿ ತನ್ನ ಕೈಯಲ್ಲಿದ್ದ ವಾಯರ್ ಕೈಚೀಲವನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಲು ಪ್ರಯತ್ನಿಸಿದನು. ಆತನನ್ನು ಹಿಡಿಯಲು ಪ್ರಯತ್ನಿಸಿದಾಗ ಆತನು ತಪ್ಪಿಸಿಕೊಂಡು ಪರಾರಿಯಾಗಿರುತ್ತಾನೆ. ಆ ನಂತರ ಘಟನಾ ಸ್ಥಳಕ್ಕೆ ಬಂದು ಶೋದನಾ ವಾರಂಟನ್ನು ತಯಾರಿಸಿ ಸದರಿ ಕೈಚೀಲವನ್ನು ಪರೀಶೀಲಿಸಿದಾಗ 180 ಎಮಎಲನ ಮಹಾರಾಷ್ಟ್ರ ದೇಸಿ ಸಾಂತ್ರಾ ನೇದರ 28 ಬಾಟಲಿಗಳು ಕಂಡು ಬಂದಿರುತ್ತವೆ. ಅವುಗಳ ಪೈಕಿ ಪಂಚರ ಸಮಕ್ಷಮ ಒಂದು ಬಾಟಲಿಯನ್ನು ರಾಸಾಯಿನಿಕ ಪರೀಕ್ಷೆಗಾಗಿ ಕಾಯ್ದಿರಿಸಲಾಗಿತ್ತು. ಓಡಿ ಹೋದ ವ್ಯಕ್ತಿಯ ಹೆಸರು ಅಶೋಕ ಅಪ್ಪಸಾಬ ನರೋಟೆ ಎಂದು ಗೊತ್ತಾಗಿರುತ್ತದೆ. ಆ ನಂತರ ಮುದ್ದೆಮಾಲನ್ನು ನನ್ನ ತಾಬಾಕ್ಕೆ

ತೆಗೆದುಕೊಂಡು ಕಛೇರಿಗೆ ಬಂದು ಚಾಸಾ-5 ರವರ ಪಿರ್ಯಾದಿಯನ್ನು ನೀಡಿರುತ್ತಾರೆ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಮುದ್ದೆಮಾಲು 1 ನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಆದರೆ ಸದರಿ ಗುರುತನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ತೆಗೆದುಕೊಳ್ಳಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. **A G G.** ವಕೀಲರಿಂದಃ</u>

ಸದರಿ ಮುದ್ದೆಮಾಲಿನ ಮೇಲೆ ಸಿ.ಸಿ. ನಂಬರ 908/2015 ಎಂದು ನಮೂದು ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಮುದ್ದೆಮಾಲನ್ನು ಯಾವ ಪಿಎಫ ನಂಬರನ ಕೆಳಗೆ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇವೆ ಎಂದು ನನಗೆ ಗೊತ್ತಿಲ್ಲ. ಅದು ತನಿಖಾಧಿಕಾರಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಮುದ್ದೆಮಾಲಿನ ಮೇಲೆ ಗುನ್ನಾ ನಂಬರ 4/2003 ಎಂದು ನಮೂದುದಾಗಿರುತ್ತದೆ ಎಂದರೆ ಸರಿ. ಸದರಿ ಮುದ್ದೆಮಾಲಿನ ಮೇಲೆ ನಾವು ಅಂಟಿಸಿದ್ದ ಚೀಟಿ ಹರಿದು ಹೋಗಿರುತ್ತದೆ ಎಂದರೆ ಸಾಕ್ಷಿಯು ಮಧ್ಯ ಮಧ್ಯದಲ್ಲಿ ಹರಿದು ಹೋಗಿರುತ್ತದೆ ಎಂದು ನುಡಿಯುತ್ತಾರೆ. ಮುದ್ದೆಮಾಲಿನ ಬಾಟಲಿ ಖಾಲಿ ಇರುತ್ತದೆ ಎಂದರೆ ಸರಿ. ಸದರಿ ಮುದ್ದೆಮಾಲಿನ ಮೇಲೆ ಎರಡು ಪಿ.ಆರ ನಂಬರಗಳು ಇರುತ್ತವೆ ಎಂದರೆ ಸರಿ. ಆರೋಪಿತನು 2009 ರಿಂದ ಪರಿಚಯ ಇದೆ ಎಂದರೆ ಸರಿ. ಸದರಿ ಆರೋಪಿತನು ನಾವು ಹೇಳಿದಾಗ ನಮ್ಮ ಕಛೇರಿಗೆ ಬಂದು ನಮ್ಮನ್ನು ಭೇಟಿ ಆಗಿ ಹೋಗುತ್ತಾನೆ ಎಂದರೆ ಸಾಕ್ಷಿಯು ನಮ್ಮ ಸಿಬ್ಬಂದಿಯವರು ಕರೆಸಿದರೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತನು ಸೈಕಲ ಅಂಗಡಿ ನಡೆಸುತ್ತಾನೆ ಮತ್ತು ಶೇತ್ಕಿ ಮಾಡುತ್ತಾನೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಆರೋಪಿತನು ಯಾವತ್ತೂ ಸಹ ಸಾರಾಯಿ ವ್ಯಾಪಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖೆಯಲ್ಲಿ ವರ್ಷಕ್ಕೆ ಇಂತಿಷ್ಟು ಪ್ರಕರಣಗಳಲ್ಲಿ ದಾಖಲು ಮಾಡಬೇಕೆಂದ ನಿಯಮ ಇದೆ ಎಂದರೆ ಸಾಕ್ಷಿ ಹಾಗೆನಿಲ್ಲ ಎಂದು ನುಡಿಯುತ್ತಾರೆ.

ಅಂದು ಸಂಬರಗಿ ಕಿಳೇಗಾಂವ ಮುಖಾಂತರ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ನಾವು ಠಾಣೆಯಿಂದ ಹೊರಟಾಗ 4.00 ಗಂಟೆ ಆಗಿತ್ತು. ಅಂದು ವಾಹನದಲ್ಲಿ ನಾನು, ಚಾಸಾ-5 ಹಾಗೂ ಪಂಚರು ಮತ್ತು ಇನ್ನೊಬ್ಬ ಸಿಬ್ಬಂದಿಯವರು ಹಾಜರು ಇದ್ದರು. ಸಂಬರಗಿ ಗ್ರಾಮ ತಲುಪಿದಾಗ 4.50 ಗಂಟೆ ಆಗಿತ್ತು. ಸಂಜೆ 4.50 ಗಂಟೆಗೆ ಸಾಕಷ್ಟು ಬೆಳಕು ಇರುತ್ತದೆ ಮತ್ತು ಸಾಕಷ್ಟು ಜನರು

ಇರುತ್ತಾರೆ ಎಂದರೆ ಸರಿ.  ಆಗ ನಾವು ಹೋದಾಗ 200-300 ಜನರು ಇದ್ದರು ಎಂದರೆ ಸಾಕ್ಷಿ ಅಷ್ಟು ಜನ ಇರಲಿಲ್ಲ,  ಸುಮಾರು 7-8 ಜನ ಇದ್ದರು ಎಂದು ನುಡಿಯುತ್ತಾರೆ.  ಅಲ್ಲಿದ್ದ ಜನರನ್ನು ಸಾರಾಯಿ ಯಾರು ಮಾರಾಟ ಮಾಡುತಿದ್ದಾರೆ ಎಂದು ಚೌಕಾಶಿ ಮಾಡಿಲ್ಲ. ಅಲ್ಲಿದ್ದ ಜನರನ್ನು ಪಂಚರಾಗಿ ತೆಗೆದುಕೊಳ್ಳಲು ಯಾವುದೇ ಅಡಚಣೆ ಇತ್ತೆ ಎಂದರೆ ಅವರು ಕರೆದರೆ ಬರಲಿಲ್ಲ ಎಂದು ನುಡಿಯುತ್ತಾರೆ. ಚಾಸಾ-1 ಮತ್ತು 2 ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಸದರಿ ಅಂದು ನಾವು ಘಟನಾ ಸ್ಥಳಕ್ಕೆ ಹೋಗಿರಲಿಲ್ಲ, ನಿಮ್ಮ ಪೊಲೀಸಠಾಣೆಯಲ್ಲಿ ಲಭ್ಯ ಇದ್ದ ಬೇರೆ ಮುದ್ದೆಮಾಲಿಗೆ ಸಂಬಂದಿಸಿದಂತೆ ಆರೋಪಿತನ ವಿರುದ್ಧ ಖೊಟ್ಟಿ ಪಿರ್ಯಾದಿ ಸಲ್ಲಿಸಿ ಆತನ ವಿರುದ್ಧ ಖೊಟ್ಟಿಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ  ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.